ಶ್ರೀ ಎ. ರಾಮದಾಸ್:— ಒಂದೇ ಒಂದು ಪದದಿಂದ ಯಾರು ತಪ್ಪನ್ನು ಮಾಡಿದ್ದಾರೋ ಅವರು ತಪ್ಪಿಸಿಕೊಳ್ಳುವುದು ಬೇಡ, ಅವರು ಕಾರ್ಡನ್ನು ತಿದ್ದಿದ್ದಾರೆಂದು ಮಂತ್ರಿಗಳು ಹೇಳುತ್ತಾರೆ, ಹಸಿರಿರಬಹುದು, ಹಳದಿ ಇರಬಹುದು. ಅಂಗಡಿಯ ಮಾಲಿಕನೇ ಕಾರ್ಡನ್ನು ತಿದ್ದಿ, ತನಿಖೆಯಾಗಿ ಕ್ರಮ ಕೈಗೊಂಡಿರುವ ಎಲ್ಲಾ ಪ್ರಕರಣವಿರುವಾಗ, ಹಳದಿ, ಕೇಸರಿ ಎಂಬುವ ಪದದಿಂದಾಗಿ ಕ್ರಮವನ್ನು ಏನು ತೆಗೆದುಕೊಂಡಿಲ್ಲವೆಂದು ಮಂತ್ರಿಗಳು ಹೇಳುವುದು ಬೇಡ, ಕ್ರಮ ಕೈಗೊಳ್ಳಬೇಕು, ಜಿಲ್ಲಾಧಿಕಾರಿಗಳು ಎಲ್ಲಾ ಕ್ರಮವನ್ನು ಕೈಗೊಂಡು ಸಸ್ಪೆಂಡ್ ಮಾಡಿದ ಮೇಲೂ ಮತ್ತೆ ಏತಕ್ಕೆ ಅಂಗಡಿ ನಡೆಸಲು ಅವಕಾಶ ಕೊಟ್ಟರು.

ಶ್ರೀ ಡಿ.ಬಿ. ಇನಾಂದಾರ್:— ಹಳದಿ ಕಾರ್ಡಿಗೆ ಪರಿವರ್ತನೆ ಮಾಡಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು, ಹಳದಿ ಕಾರ್ಡಿನ ಯೋಜನೆಯನ್ನು ನಾವು ಇನ್ನೂ ಜಾರಿಗೆ ತಂದಿಲ್ಲ ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ಉತ್ತರ ಕೊಟ್ಟಿದ್ದೇನೆ. ಹಳದಿ ಕಾರ್ಡ್ ಬಗ್ಗೆ ಪ್ರಶ್ನೆ ಕೇಳಿ ಕೇಸರಿ ಕಾರ್ಡ್ ಬಗ್ಗೆ ಕೊಡಿ ಎಂದರೆ ಕೊಡಲು ಸಾಧ್ಯವಿಲ್ಲ. ಆದರೆ ಬದಲಾವಣೆಯಾಗಿದೆ, ತಪ್ಪಾಗಿದೆ ಎಂದು ನನಗೆ ತಿಳಿದ ನಂತರ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ.

ಬಿಜಾಪುರ ನಗರಸಭೆಯ ಚರಾಸ್ತಿಗಳ ಗುತ್ತಿಗೆ ಬಗ್ಗೆ.

472(4110) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತೀಕೋಟ):— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರಸಭೆಯ ಚರಾಸ್ತಿಗಳನ್ನು 101 ವರ್ಷ, 90 ವರ್ಷ ಹಾಗೂ ಹಲವು ವರ್ಷಗಳವರೆಗೆ ಗುತ್ತಿಗೆ ಅವಧಿ ಮುಗಿದಿದ್ದರೂ ಪುನಃ ಗುತ್ತಿಗೆ ಮೇಲೆ ನಾಗರೀಕರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗುತ್ತಿಗೆ ಅವಧಿ ಮುಗಿದಿದ್ದರೂ ಪುನಃ ನವೀಕರಣ ಮಾಡದಿರಲು ಕಾರಣವೇನು?

ಇ) ಸಕಾಲದಲ್ಲಿ ಗುತ್ತಿಗೆ ನೀಡದೆ ನಾಗರೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗುತ್ತಿಗೆ ಮೇಲೆ ಸ್ಥಿರಾಸ್ತಿ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಈ) ಕೆಲವು ಲೀಜ್ ಆಸ್ತಿಗಳ ಮೇಲೆ ಕಟ್ಟಡ ಕಟ್ಟಲು ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇದರಿಂದ ನಗರಸಭೆಯ ಆದಾಯ ಕಡಿಮೆಯಾಗಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):—

ಅ) ಬಂದಿದೆ.

ಆ) ಸದರಿ ಆಸ್ತಿಗಳನ್ನು 1886ರ ದಶಕದಲ್ಲಿ ಅಂದಿನ ನಗರ ಸಭೆಯವರು 99 ವರ್ಷಗಳ 50 ವರ್ಷಗಳ ಹಾಗೂ 30 ವರ್ಷಗಳ ದೀರ್ಘಾವಧಿ ಲೀಜ್ ಮೇಲೆ ಸಾರ್ವಜನಿಕರಿಗೆ ವಸತಿ ಹಾಗೂ ವಾಣಿಜ್ಯ ಉಪಯೋಗಕ್ಕಾಗಿ ನೀಡಿದ್ದು, ಅನಂತರ ನಗರಸಭೆಯವರು 1995ನೇ ಸಾಲಿನವರೆಗೆ ಈ ಕುರಿತಂತೆ ಯಾವುದೇ ರೀತಿಯ ಕ್ರಮವನ್ನು ಜರುಗಿಸದೆ ಇರುವುದರಿಂದ ಸದರಿ ಆಸ್ತಿಗಳ ಹಲವಾರು ಪ್ರಕರಣಗಳಲ್ಲಿ ಲೀಜ್ ಅವಧಿ ಮುಗಿದು ಹೋಗಿದ್ದರಿಂದ ಅವರುಗಳಿಗೆ ನಗರಸಭೆಯಿಂದ ಕಟ್ಟಡ ಕಟ್ಟಲು ಅನುಮತಿ ನೀಡಲು, ಖಾತಾ ಬದಲಾವಣೆ ಮಾಡಲು ಹಾಗೂ ಬೇರೆಯವರಿಗೆ ಮಾರಾಟ ಮಾಡಲು ಇತ್ಯಾದಿಗಳನ್ನು ತಡೆಹಿಡಿಯಲಾಗಿದ್ದು ಹಾಗೂ ನಗರ ಸಭೆಯ ಹಂತದಲ್ಲಿ ಸದರಿ ಆಸ್ತಿಗಳ ಲೀಜ್ ಅವಧಿಯನ್ನು ಮುಂದುವರೆಸಲು ಕಾನೂನಿನಲ್ಲಿ ಅವಕಾಶವಿಲ್ಲದೆ ಇರುವುದರಿಂದ ದಿನಾಂಕ: 9-3-1998 ಹಾಗೂ 4-7-1998ರಂದು ನಗರಸಭೆಯ ಕೌನ್ಸಿಲ್ ನಲ್ಲಿ ಸದರಿ ಆಸ್ತಿಗಳ ಲೀಜ್ ಅವಧಿಯನ್ನು ಮುಂದುವರೆಸುವ ಕುರಿತಂತೆ ತರಾವುಗಳನ್ನು ಪಾಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಸದರಿ ಪ್ರಕರಣವು ಸರ್ಕಾರದ ಪರಿಶೀಲನೆಯಲ್ಲಿದ್ದು ಅತೀ ಶೀಘ್ರದಲ್ಲಿ ಸರ್ಕಾರದ ಮಂಜೂರಾತಿಯನ್ನು ನೀಡಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ನಗರಸಭೆಯು ಸರ್ಕಾರವು ಪ್ರತಿ ತಿಂಗಳೂ ಬಿಡುಗಡೆ ಮಾಡುವ ರಾಜ್ಯ ಹಣಕಾಸು ಆಯೋಗದ ಅನುದಾನವನ್ನು ಒಳಗೊಂಡಂತೆ ಇನ್ನೂ ಹಲವು ಆದಾಯದ ಮೂಲಗಳನ್ನು ಹೊಂದಿದೆ. ಆದುದರಿಂದ ನಗರ ಸಭೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಣದ ಕೊರತೆಯಿರುವುದಿಲ್ಲ.

ಶ್ರೀ ಎಸ್. ಶಿವಾನಂದ ಪಾಟೀಲ್:— ಮಾನ್ಯ ಅಧ್ಯಕ್ಷರೆ, ಇದು ಕೇವಲ ಬಿಜಾಪುರ ನಗರಸಭೆಗೆ ಸೀಮಿತವಾಗಿರತಕ್ಕಂಥ ಪ್ರಶ್ನೆಯಲ್ಲ. ರಾಜ್ಯದಲ್ಲಿರತಕ್ಕಂಥ ಬಹುತೇಕ ನಗರಸಭೆಗಳಿಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ ಇದು. ಬಿಜಾಪುರ ನಗರಸಭೆಯಲ್ಲಿ 1500

ಚರಾಸ್ತಿಗಳನ್ನು ಲೀಸ್ ಮೇಲೆ ಕೊಟ್ಟಿದ್ದಾರೆ. ಬಹುತೇಕ ಚರಾಸ್ತಿಗಳ ಲೀಸ್ 1995ರಿಂದಲೇ ಮುಗಿದಿದೆ. ಇದನ್ನು ನವೀಕರಣ ಮಾಡಲು ನಗರಸಭೆಯವರು 1998ರಲ್ಲಿ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅದರ ಜೊತೆಗೆ ನಗರಸಭೆಯ ಅಧ್ಯಕ್ಷರು ಮತ್ತು ಸದಸ್ಯರು 2-3 ಸಲ ಬಂದು ತಮ್ಮನ್ನು ಕಂಡಿದ್ದಾರೆ. ಇದರ ಬಗ್ಗೆ ಏನಾದರೊಂದು ನಿರ್ಣಯವನ್ನು ಅತೀ ಶೀಘ್ರವಾಗಿ ತೆಗೆದುಕೊಂಡು ಅಲ್ಲಿರತಕ್ಕಂಥ ಲೀಸ್ ಹೋಲ್ಡರ್‌ಗಳಿಗೆ ಲೀಸ್ ಅನ್ನು ನವೀಕರಿಸಿ ಕೊಡಬೇಕು. ಇದನ್ನು ನವೀಕರಿಸದಿದ್ದರೆ ಬಿಜಾಪುರದ ನಗರಸಭೆಯ ಆದಾಯ ಎಷ್ಟು ಕುಂಠಿತವಾಗುತ್ತದೆ ಎನ್ನುವುದು ತಮ್ಮ ಗಮನಕ್ಕೂ ಬಂದಿರಬಹುದು. ನವೀಕರಣ ಆಗದೇ ಇರುವುದರಿಂದ ಯಾವುದೇ ಟ್ರಾನ್ಸಾಕ್ಷನ್ ಮಾಡಲು ಆಗುತ್ತಿಲ್ಲ. ಲೀಸ್ ಅನ್ನು ಎಕ್ಸ್‌ಟೆಂಟ್ ಮಾಡಬೇಕಾಗಿದೆ. ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಅಥವಾ ಅಲ್ಟರೇಷನ್ ಮಾಡಬೇಕಾದರೂ ಸಹ ಪರ್ಮಿಷನ್ ಕೊಡಲು ಆಗುತ್ತಿಲ್ಲ. ಜೊತೆಗೆ, ಇಲ್ಲೀಗಲ್ ಟ್ರಾನ್ಸಾಕ್ಷನ್‌ಗಳು ನಡೆಯುತ್ತಿವೆ. ಎಷ್ಟೋ ಜನ ಪರ್ಮಿಷನ್ ಇಲ್ಲದೆ ಕಟ್ಟುತ್ತಿದ್ದಾರೆ. ಒಬ್ಬರೂ ಕೂಡ ನಗರಸಭೆಯ ಅಧಿಕಾರಿಗಳನ್ನು ನೋಡಲು ತಯಾರಿಲ್ಲ. ಅಕಸ್ಮಾತ್ ಯಾರಾದರೂ ಮಾಲೀಕರು ಅಧಿಕಾರಿಗಳ ಬಳಿಗೆ ಹೋದರೆ, ಅಧಿಕಾರಿಗಳು ಇಲ್ಲೀಗಲ್ ಆಗಿ ಅವರ ಕಡೆಯಿಂದ ಸ್ವಲ್ಪ ದುಡ್ಡು ತೆಗೆದುಕೊಂಡು ಅದನ್ನು ಮುಗಿಸಿಬಿಡತಕ್ಕಂಥ ಪ್ರಕ್ರಿಯೆ ಪ್ರಾರಂಭವಾಗಿದೆ. ಮೊನ್ನೆ ಕೂಡ ಬಿಜಾಪುರದಲ್ಲಿ ಒಬ್ಬ ಅಧಿಕಾರಿ ಲೋಕಾಯುಕ್ತದವರ ಕೈಗೆ ಸಿಕ್ಕಿಹಾಕಿಕೊಂಡಿದ್ದಾನೆ. ಅವನ ಮೇಲೆ ತಾವು ಇನ್ನೂ ಕ್ರಮ ಕೈಗೊಂಡಿಲ್ಲ. ದಯಮಾಡಿ, ಆದಷ್ಟು ತೀವ್ರವಾಗಿ, ಅಂದರೆ ಎಷ್ಟು ದಿವಸಗಳಲ್ಲಿ ನಿರ್ಣಯ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. 1998ರಲ್ಲೇ ನಿಮಗೆ ಪ್ರಸ್ತಾವನೆ ಬಂದಿದೆ. ಆದರೆ ಇದುವರೆಗೂ ತಾವು ಒಂದು ನಿರ್ಣಯವನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಯಾವಾಗ ನಿರ್ಣಯ ತೆಗೆದುಕೊಳ್ಳುತ್ತೀರಿ ಎನ್ನುವುದಕ್ಕೆ ಒಂದು ನಿಗಧಿಯಾದ ದಿನಾಂಕವನ್ನು ಹೇಳಿ. ತಾವು ಸಚಿವರಾಗಿ ಬಂದ ಮೇಲೆ ಸಹ ಎರಡು ಎರಡು ಸಭೆಗಳನ್ನು ಮಾಡಿದ್ದೀರಿ. ಇದರ ಬಗ್ಗೆ ಯಾವಾಗ ನಿರ್ಣಯ ತೆಗೆದುಕೊಳ್ಳುತ್ತೀರಿ ಮತ್ತು ಈ ವಿಚಾರದಲ್ಲಿ ಲೋಕಾಯುಕ್ತಕ್ಕೆ ಸಿಕ್ಕಿರುವ ಅಧಿಕಾರಿಯ ಮೇಲೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ ಮತ್ತು ಯಾವಾಗ ಕೈಗೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:— ಮಾನ್ಯ ಅಧ್ಯಕ್ಷರೆ, ಲೀಸ್ ಪ್ರಾಪರ್ಟಿ ಎನ್ನುವುದು ಮೊದಲಿನ ಬಾಂಬೆ-ಕರ್ನಾಟಕ ವ್ಯಾಪ್ತಿಯಲ್ಲಿ ಬರತಕ್ಕಂಥ ನಗರಸಭೆಗಳಲ್ಲಿ ಮಾತ್ರ ಇತ್ತು. ಬಿಜಾಪುರ, ಹಾರವಾರ, ಬಾಗಲಕೋಟೆ, ಬೆಳಗಾಂ ಈ ಕಡೆಗಳಲ್ಲಿ 1886ರಿಂದ ಪ್ರಾಪರ್ಟಿಗಳನ್ನು ಲೀಸ್ ಮೇಲೆ ಕೊಟ್ಟಿದ್ದಾರೆ. ಕೆಲವನ್ನು 100 ವರ್ಷ, ಕೆಲವನ್ನು 50ವರ್ಷ, ಕೆಲವನ್ನು 30 ವರ್ಷಕ್ಕೆ ಕೊಟ್ಟಿದ್ದಾರೆ. ಬೇರೆ ಬೇರೆ ನಿವೇಶನಗಳನ್ನು ಬೇರೆಬೇರೆ ಅವಧಿಗೆ ಕೊಟ್ಟಿದ್ದಾರೆ. 1995ರಲ್ಲಿ ಜೈನ್ ಎನ್ನುವ ಒಬ್ಬ ಅಧಿಕಾರಿ ಈ ಲೀಸ್ ಪ್ರಾಪರ್ಟಿಗಳ ಬಗ್ಗೆ ಏನಾದರೂ ಮಾಡಬೇಕು ಎಂದು ಹೇಳಿದಾಗ ಇದು ಸರ್ಕಾರದ ಗಮನಕ್ಕೆ ಬಂತು. ಅಲ್ಲಿಯವರೆಗೆ

ಇದು ಸರ್ಕಾರಕ್ಕೆ ಕೂಡ ಗೊತ್ತಾಗಿರಲಿಲ್ಲ. ಈ ಲೀಸ್ ಪ್ರಾಪರ್ಟಿಗಳನ್ನು ಯಾವ ರೀತಿ ರೆಗ್ಯುಲರೈಸ್ ಮಾಡಬೇಕು, ಯಾವ ರೀತಿ ಲೀಸ್ ಅನ್ನು ಎಕ್ಸ್‌ಟೆಂಡ್ ಮಾಡಬೇಕು ಎನ್ನುವುದರ ಬಗ್ಗೆ ಅಲ್ಲಿನ ನಗರಸಭೆಯವರು ಉಪ ಸಮಿತಿಗಳನ್ನು ಮಾಡಿ ಚರ್ಚೆ ಮಾಡಿದ್ದರು. ಅವರು 1998ರಲ್ಲಿ ಒಂದು ಸಲ ಮೀಟಿಂಗ್ ಮಾಡಿ, ಯಾವ ರೀತಿ ಆಸ್ತಿಗಳನ್ನು ಯಾವ ರೀತಿ ಚದುರ ಅಡಿಗೆ ಇಷ್ಟು ಕೊಡಬೇಕು ಎನ್ನುವ ಬಗ್ಗೆ ಒಂದು ರೇಟ್ ಅನ್ನು ನಿಗದಿ ಮಾಡಿದ್ದರು. ಪ್ರತಿ ತಿಂಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ಐದು ಪೈಸೆ ಮತ್ತು ವಸತಿಗೆ ಇಷ್ಟು ಕೊಡಬೇಕು ಎಂದು ನಿಗದಿ ಮಾಡಿದ್ದರು. ನಂತರ ಅವರಲ್ಲಿ ಒಟ್ಟಾಭಿಪ್ರಾಯ ಬರದೇ ಇದ್ದುದಕ್ಕಾಗಿ, ಮತ್ತೊಂದು ಸಭೆಯನ್ನು ಮಾಡಿ ನಗರಸಭೆಗಳಿಗೆ ಹೆಚ್ಚಿನ ಆದಾಯ ಬರಲಿ ಎನ್ನುವ ದೃಷ್ಟಿಯಿಂದ, ಅದು ಹೆಚ್ಚಿಗೆ ಆಗಬೇಕು ಎಂದು ಮತ್ತೊಂದು ನಿರ್ಣಯವನ್ನು ಮಾಡಿದ್ದರು. ಅದು ಅದಮೇಲೆ ಯಾವುದೇ ನಿರ್ಣಯವಾಗಿಲ್ಲ. ನಂತರ 1999ರಲ್ಲಿ ಜಿಲ್ಲಾಧಿಕಾರಿಗಳು ಕಾಂಪ್ರೊಮೈಸ್ ಮಾಡಿ, ನಗರಸಭೆಗಳ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಒಂದು ರೇಟ್ ನಿಗದಿಮಾಡಿದ್ದರು. ಪ್ರತಿ ಚದುರ ಅಡಿಗೆ ವಾಣಿಜ್ಯ ನಿವೇಶನಕ್ಕೆ 55 ಪೈಸೆ, ವಸತಿ ನಿವೇಶನಕ್ಕೆ 40 ಪೈಸೆ ಎಂದು ಮಾಡಿದ್ದರು. ಇದನ್ನು ಅವರು ಸರ್ಕಾರಕ್ಕೆ ಕಳುಹಿಸಿದ ಮೇಲೆ ಆರ್ಥಿಕ ಇಲಾಖೆಯವರು ಇದು ಬಹಳ ಕಡಿಮೆಯಾಗುತ್ತದೆ, ಇದರಿಂದ ನಗರಸಭೆಗಳಿಗೆ ಹಣಕಾಸಿನ ಆದಾಯ ಬಹಳ ಕಡಿಮೆಯಾಗುತ್ತದೆ ಎಂದು ಅವರು ವಸತಿ ನಿವೇಶನಕ್ಕೆ ಒಂದು ರೂಪಾಯಿ, ವಾಣಿಜ್ಯ ನಿವೇಶನಕ್ಕೆ ಎರಡು ರೂಪಾಯಿ ಎಂದು ರೇಟ್ ಅನ್ನು ನಿಗದಿ ಮಾಡಿದ್ದಾರೆ. ಮೊದಲು ಜಿಲ್ಲಾಧಿಕಾರಿಗಳು ರೇಟ್ ನಿಗದಿ ಮಾಡಿದಾಗ ಸುಮಾರು 11 ಲಕ್ಷ ರೂಪಾಯಿ ಆದಾಯವನ್ನು ನಾವು ನಿರೀಕ್ಷೆ ಮಾಡಿದ್ದೆವು. ತದನಂತರ, ಈಗ ಆರ್ಥಿಕ ಇಲಾಖೆಯವರು ಮಾಡಿರುವ ಶಿಫಾರಸ್ಸಿನ ಮೇರೆಗೆ ನಾವು ಸುಮಾರು 50 ಲಕ್ಷ ರೂಪಾಯಿ ಆದಾಯವನ್ನು ಪ್ರತಿವರ್ಷ ನಿರೀಕ್ಷೆ ಮಾಡಿದ್ದೇವೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಲೀಸ್ ಅನ್ನು ಮುಂದುವರೆಸತಕ್ಕಂಥಾದ್ದಕ್ಕೆ ಕಾನೂನಿನ ವ್ಯಾಪ್ತಿಯಲ್ಲಿ ಯಾವಯಾವ ಕ್ರಮ ಕೈಗೊಳ್ಳಬೇಕೋ, ಅದನ್ನು ಶೀಘ್ರವಾಗಿ ಆ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಸ್. ಶಿವಾನಂದ ಪಾಟೀಲ್:— ಆದಷ್ಟು ಶೀಘ್ರವಾಗಿ ಎನ್ನುವ ಮಾತು ಕಳೆದ ಎರಡು ವರ್ಷಗಳಿಂದ ಕೇಳಿಬರುತ್ತಿದೆ. ಬಿಜಾಪುರ ನಗರಸಭೆಯಲ್ಲಿ ಯಾವುದೇ ಬಿಲ್ಡಿಂಗ್ ಕಟ್ಟಲು ಆಗುತ್ತಿಲ್ಲ. ಕನಿಷ್ಠ ಅಲ್ಟರೇಷನ್ ಮಾಡಬೇಕಾದರೂ ಕೂಡ ಪರ್ಮಿಷನ್ ಕೊಡಲು ಆಗುತ್ತಿಲ್ಲ. ಮಾಡಬೇಕಾದರೆ ಇಲ್ಲೀಗಲ್ ಆಗಿಯೇ ಮಾಡಬೇಕು. ಕಳೆದ ಎರಡು ವರ್ಷಗಳಿಂದ ಇಲ್ಲೀಗಲ್ ಆಗಿಯೇ ಅಲ್ಟರೇಷನ್‌ಗಳು ನಡೆದಿವೆ. ಸುಮಾರು ಒಂದೂವರೆ ಸಾವಿರದಷ್ಟು ಇಂಥ ಪ್ರಾಪರ್ಟಿಗಳು ಇವೆ. ನಗರಸಭೆಯವರು ಮತ್ತು ಜಿಲ್ಲಾಧಿಕಾರಿಗಳು ಸೇರಿ ಮಾಡಿರುವಂಥ ನಿರ್ಣಯ ಒಂದು ಕಾನ್ಸೆನ್ಸಸ್ ಮೇಲೆ ಮಾಡಿರತಕ್ಕಂಥಾದ್ದು. ಆರ್ಥಿಕ ಇಲಾಖೆಯವರು ಮಾಡತಕ್ಕಂಥ ನಿರ್ಣಯವನ್ನು ಯಾರೂ ಒಪ್ಪುವುದಿಲ್ಲ. ಏಕೆಂದರೆ, ಬಿಜಾಪುರ ನಗರಸಭೆಗೆ ಸಂಬಂಧಪಟ್ಟಂತೆ ಅವರು ತೆಗೆದುಕೊಂಡಿರುವ

ನಿರ್ಣಯದಂತೆ ಲೀಸ್ ಅಮೌಂಟ್ ತೀರಾ 200ರಷ್ಟು ಹೆಚ್ಚಾಗಿದೆ. ಒರಿಜಿನಲ್ ಲೀಸ್ ಕೊಟ್ಟಂಥ ಸಂದರ್ಭದಲ್ಲಿ ಇದ್ದಂಥ ರೇಟಿಗೂ, ಮೊನ್ನೆ ಇವರು ಮಾಡಿರತಕ್ಕಂಥ ರೇಟಿಗೂ ಹನಿಷ್ಟ 200 ಪಟ್ಟು ಹೆಚ್ಚಿಗೆ ಆಗಿದೆ. ಅರ್ಥಿಕ ಇಲಾಖೆಯವರು ಹೇಳಿದ್ದಾರೆ ಎಂದು ತಾವು ಅದನ್ನು ಹೆಚ್ಚಿಗೆ ಮಾಡಲು ಹೋದರೆ ಅಲ್ಲಿಯ ಜನ ಒಪ್ಪಿಕೊಳ್ಳುವುದಿಲ್ಲ. ಜಿಲ್ಲಾಧಿಕಾರಿಗಳು, ಸಾರ್ವಜನಿಕರು ಮತ್ತು ಅಲ್ಲಿನ ನಗರಸಭೆಯವರು ಕೈಗೊಂಡಿರುವ ನಿರ್ಣಯಕ್ಕೆ ತಾವು ಸ್ಪಿಕ್ಟಿಅನ್ ಆಗಿ ಅದರಂತೆ ಒಂದು ನಿರ್ಣಯವನ್ನು ತೆಗೆದುಕೊಂಡು ಇದನ್ನು ಆದಷ್ಟು ಶೀಘ್ರವಾಗಿ ಬಗೆಹರಿಸತಕ್ಕಂಥಾದ್ದಕ್ಕೆ ಒಂದು ನಿರ್ದಿಷ್ಟವಾದ ದಿನಾಂಕವನ್ನು ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು 1998ರಿಂದಲೂ ನಡೆದಿದೆ. ಎರಡನೆಯದಾಗಿ, ಅಲ್ಲಿನ ನಗರಸಭೆಗೆ ಹಾಕಿರತಕ್ಕಂಥ ಅಧಿಕಾರಿ ಕೂಡ ಕೆ.ಎಂ.ಎಸ್. ಅಧಿಕಾರಿಯಲ್ಲ. ಒಬ್ಬ ರೆವಿನ್ಯೂ ಅಧಿಕಾರಿಯನ್ನು ಹಾಕಿಬಿಟ್ಟಿದ್ದೀರಿ. ಅಲ್ಲಿ ಸಿಕ್ಕಾಪಟ್ಟೆ ಅಧ್ವಾನವೆದ್ದು ಹೋಗಿದೆ. ಇದನ್ನು ರೆಕ್ಟಿಫೈ ಮಾಡಲು ಅಲ್ಲಿಗೆ ಒಬ್ಬ ಕೆ.ಎಂ.ಎಸ್. ಅಧಿಕಾರಿಯನ್ನು ಹಾಕಿ ಎಂದು ಹೇಳುತ್ತಿದ್ದೇನೆ. ಕೆ.ಎಂ.ಎಸ್. ಅಧಿಕಾರಿಯ ಬದಲು ಒಬ್ಬ ರೆವಿನ್ಯೂ ಅಧಿಕಾರಿಯನ್ನು ಹಾಕಿದರೆ ಇಂಥ ಪರಿಸ್ಥಿತಿ ಬರುವುದು ಸ್ವಾಭಾವಿಕವೇ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:— ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಚಾರವನ್ನೇ ನಾನೂ ಕೂಡ ಆಲೋಚನೆ ಮಾಡುತ್ತಿದ್ದೇನೆ. ನಾವು ಲೀಸ್ ಅನ್ನು ಮುಂದುವರೆಸದಿದ್ದರೆ ಸಿ.ಎಂ.ಸಿ.ಗೆ ಆದಾಯ ಬರುವುದಿಲ್ಲ. ಬಹಳ ವರ್ಷಗಳಿಂದ ಅಲ್ಲಿ ಇದ್ದಂಥವರನ್ನು ಬಿಡಿಸಲು ಕೂಡ ಆಗುವುದಿಲ್ಲ. ಆದ್ದರಿಂದ ಅವರ ಹಿತದೃಷ್ಟಿಯಿಂದ ಮತ್ತು ನಗರಸಭೆಗಳ ಹಿತದೃಷ್ಟಿಯಿಂದ ಅವರು ಒಪ್ಪುವುದಾದರೆ, ಈಗ ಪ್ರಚಲಿತವಿರುವ ಮಾರ್ಕೆಟ್ ರೇಟ್‌ಗೆ ಔಟ್‌ರೈಟ್ ಸೇಲ್ ಮಾಡಿಬಿಡೋಣ. ಇದರಿಂದ ಅವರಿಗೆ ಓನರ್‌ಷಿಪ್ ಕೂಡ ಸಿಗುತ್ತದೆ. ಈ ರೀತಿಯ ಕಾಂಪ್ರೊಮೈಸ್ ಬೇಕಾದರೆ ಮಾಡೋಣ. ಈ ಬಗ್ಗೆ ನಾನು ಶಿವಾನಂದ ಪಾಟೀಲರನ್ನು ಮತ್ತು ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಹಾಗೂ ಕಮೀಷನರ್‌ರವರನ್ನು ಹಾಗೂ ಸಚಿವಾಲಯದ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ, ಜನರಿಗೆ ಅನುಕೂಲವಾಗತಕ್ಕಂಥ ಮತ್ತು ಕಾನೂನಿನ ವ್ಯಾಪ್ತಿಯಲ್ಲಿ ಅವರಿಗೆ ಯಾವ ರೀತಿ ಸಹಾಯ ಮಾಡಲು ಸಾಧ್ಯವಿದೆ ಎನ್ನುವ ಬಗ್ಗೆ ಒಂದು ಫಾರ್ಮುಲಾವನ್ನು ಕಂಡುಹಿಡಿದ ಮೇಲೆ ಈ ಬಗ್ಗೆ ಒಂದು ನಿರ್ಣಯ ಮಾಡುತ್ತೇವೆ.

ಬೈಂದೂರ ವಿಧಾನಸಭಾ ಕ್ಷೇತ್ರದಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿನ ಖಾಲಿಹುದ್ದೆಗಳು.

527(5008) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?